ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –

ಸಿ.ಸಿ.ನಂ. 184/2022
ಸಿ.ಡಬ್ಲ್ಯೂ.–3
ಪಿ.ಡಬ್ಲ್ಯೂ –3

ಸಾಕ್ಷಿದಾರರ ಹೆಸರು : ವಿಜಯ್ ಕುಮಾರ್ ಕೆ.
ತಂದೆಯ ಹೆಸರು : ಹುಕ್ರ
ವಯಸ್ಸು : 50 ವರ್ಷ
ಉದ್ಯೋಗ : ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.
ವಾಸ : ಸವಣೂರು.
ದಿನಾಂಕ : 07–01–2025

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ನಾನು 2015 ರ ಜುಲ್ಯಾ ತಿಂಗಳಿನಿಂದ ಇಲ್ಲಿಯವರೆಗೆ ಪುತ್ತೂರು ವಲಯ, ಪುತ್ತೂರಿನಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 01–05–2021 ರಂದು ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ಕಾಯದೋಡಿ ಎಂಬಲ್ಲಿ ಆರೋಪಿಯು ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದಾರೆಂದು ನಮ್ಮ ಕಚೇರಿಗೆ ಬಾತ್ಮಿ ಬಂದಿರುತ್ತದೆ. ಸದರಿ ದಿನಾಂಕದಂದು ಚಾ.ಸಾ.1 ರವರ ನಿರ್ದೇಶನದ ಮೇರೆಗೆ ಚಾ.ಸಾ.2,ಚಾ.ಸಾ.4 ಹಾಗೂ ನಮ್ಮ ಇಲಾಖಾ ವಾಹನದ ಚಾಲಕರಾದ ಚಾ.ಸಾ.5 ಹಾಗೂ ನಾನು ನಮ್ಮ ಇಲಾಖಾ ವಾಹನ ನಂಬ್ರ ಕೆಎ–18–ಜಿ–0715 ನೇದ್ದರಲ್ಲಿ ನಮ್ಮ ಕಚೇರಿಯಿಂದ ಬೆಳಗ್ಗೆ 7.00 ಗಂಟೆಗೆ ಹೊರಟು ಪುತ್ತೂರು–ಕುಂಬ್ರ–ಜಾಲ್ಸೂರು ಮಾರ್ಗವಾಗಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಅಡ್ಡಾರು ಎಂಬ ಸ್ಥಳಕ್ಕೆ ಬಂದು , ಅಲ್ಲಿಂದ ಅಜ್ಜಾವರ -ಮಂಡೆಕೋಲು ಮಾರ್ಗವಾಗಿ, ಮಂಡೆಕೋಲಿನಿಂದ 2 ಕಿಲೋ ಮೀಟರು ಮುಂದಕ್ಕೆ ಬಂದು, ಅಲ್ಲಿಂದ ಕಚ್ಚಾ ರಸ್ತೆಯ ಮೂಲಕ ಬಾತ್ಮಿ ಬಂದ ಸ್ಥಳಕ್ಕೆ ತಲುಪಿರುತ್ತೇವೆ. ಅಲ್ಲಿ ಅಂಗಳದಲ್ಲಿ ಓರ್ವ ವ್ಯಕ್ತಿಯು ನಿಂತಿದ್ದು, ನಮ್ಮನ್ನು ಕಂಡು ಸದರಿ ವ್ಯಕ್ತಿಯು ಅಡಿಕೆ ತೋಟದೊಳಗೆ ಓಡಿ ಹೋಗಿ ಪರಾರಿಯಾಗಿರುತ್ತಾರೆ. ನಾವೆಲ್ಲರೂ ಸದರಿ ವ್ಯಕ್ತಿಯನ್ನು ಬೆನ್ನಟ್ಟಿದ್ದರೂ ನಮಗೆ ಸಿಗದೇ ಪರಾರಿಯಾಗಿರುತ್ತಾರೆ. ನಂತರ ನಾವು ತೋಟದಿಂದ ಸದರಿ ವ್ಯಕ್ತಿಯ ಮನೆಗೆ ಬಂದು, ಸದರಿ ಮನೆಯಲ್ಲಿ ಓರ್ವ ಮಹಿಳೆಯಿದ್ದು , ಅವರಲ್ಲಿ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ, ಸದರಿ ಓಡಿ ಹೋದ ವ್ಯಕ್ತಿಯು ತನ್ನ ಪತಿಯಾಗಿದ್ದು , ಅವರ ಹೆಸರು ವಿಶ್ವನಾಥ ಗೌಡ ಎಂದು ನಮಗೆ ತಿಳಿಸಿರುತ್ತಾರೆ.

ನಮಗೆ ಬಾತ್ಮಿ ಬಂದ ವಿಚಾರವನ್ನು ನಾವು ಖಚಿತಪಡಿಸಿಕೊಂಡು, ಸದರಿ ಮನೆಯನ್ನು ಶೋಧನೆ ನಡೆಸುವ ಸಲುವಾಗಿ ಪಂಚರಾಗಿ ಸಹಕರಿಸಲು ಅಲ್ಲಿ ಯಾರೂ ಸಿಗದ ಕಾರಣ, ಶೋಧನಾ ಸಮುಚ್ಚಿತ ಆಧಾರದಲ್ಲಿ ಸದರಿ ಸ್ಥಳದಲ್ಲಿಯೇ ತಯಾರಿಸಿ, ನಮ್ಮ ಹಾಗೂ ಸದರಿ ಮನೆಯಲ್ಲಿದ್ದ ಮಹಿಳೆಯ ಸಮಕ್ಷಮದಲ್ಲಿ ಸದರಿ ಮನೆಯ ಒಳಗಡೆ ಪ್ರವೇಶಿಸಿ, ಶೋಧಿಸಲಾಗಿ, ಅಲ್ಲಿ ಅಬಕಾರಿಗೆ ಸಂಬಂಧಪಟ್ಟ ಸ್ವತ್ತುಗಳು ಪತ್ತೆಯಾಗಿರುತ್ತದೆ.

ನಂತರ ಮನೆಗೆ ತಾಗಿಕೊಂಡು ಹಂಚು ಛಾವಣಿಯ ಶೆಡ್‌ನೊಳಗೆ ತೆಂಗಿನ ಮರದ ಗರಿಯ ಅಡಿಯಲ್ಲಿ 25 ಲೀಟರ್ ಸಾಮಾರ್ಥ್ಯದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಮ್

ನಲ್ಲಿ 25 ಲೀಟರ್ ಗೇರು ಹಣ್ಣಿನ ಕೊಳೆ ರಸ ಹಾಗೂ 10 ಲೀಟರ್ ಸಾಮಾರ್ಥ್ಯದ ಪ್ಲಾಸ್ಟಿಕ್ ಡಬ್ಬದಲ್ಲಿ 10 ಲೀಟರ್ ಗೇರು ಹಣ್ಣಿನ ಕೊಳೆ ರಸ ಇರುವುದು ಕಂಡು ಬಂದಿರುತ್ತದೆ. ನಂತರ ಅಲ್ಲಿಯೇ ಹುಡುಕಾಡಿದಾಗ ತಲಾ ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ 2 ಲೀಟರ್ ನಷ್ಟು ಗೇರು ಹಣ್ಣಿನ ಕಳ್ಳಭಟ್ಟಿ ಸಾರಾಯಿಯು ಇರುವುದು ಪತ್ತೆಯಾಗಿರುತ್ತದೆ.

ನಮಗೆ ದೊರೆತ 25 ಲೀಟರ್ ಸಾಮಾರ್ಥ್ಯದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಮ್ ನಿಂದ ಒಂದು ಲೀಟರ್ ಗೇರು ಹಣ್ಣಿನ ಕೊಳೆ ರಸ ಹಾಗೂ 10 ಲೀಟರ್ ಸಾಮಾರ್ಥ್ಯದ ಪ್ಲಾಸ್ಟಿಕ್ ಡಬ್ಬದಿಂದ ಒಂದು ಲೀಟರ್ ಗೇರು ಹಣ್ಣಿನ ಕೊಳೆ ರಸ ಹಾಗೂ ತಲಾ ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ 2 ಲೀಟರ್ ನಷ್ಟು ಗೇರು ಹಣ್ಣಿನ ಕಳ್ಳಭಟ್ಟಿ ಸಾರಾಯಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿ, ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಅದಕ್ಕೆ ನಮ್ಮ ಇಲಾಖಾ ಮೊಹರನ್ನು ಹಾಕಿ ಸೀಲು ಮಾಡಿ, ಅಧಿಕಾರಿ ಹಾಗೂ ಪಂಚರ ಸಹಿಯುಳ್ಳ ಮಾದರಿ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿರುತ್ತೇವೆ. ನಂತರ ಉಳಿದ ಗೇರು ಹಣ್ಣಿನ ಕೊಳೆ ರಸವನ್ನು ಸ್ಥಳದಲ್ಲಿಯೇ ನಾಶಪಡಿಸಿರುತ್ತೇವೆ.

ಮಹಜರನ್ನು ಬೆಳಗ್ಗೆ 8.25 ಗಂಟೆಯಿಂದ 9.50 ಗಂಟೆಯವರೆಗೆ ತಕ್ಷೀರು ಸ್ಥಳದಲ್ಲಿ ಜರಗಿಸಲಾಗಿರುತ್ತದೆ. ನಾನು ಈಗ ನ್ಯಾಯಾಲಯದಲ್ಲಿ ಮಹಜರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ

ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ನಾನು ಈಗ ನ್ಯಾಯಾಲಯದಲ್ಲಿ ಮಾದರಿ ಮೊಹರನ್ನು ನೋಡುತ್ತಿದ್ದು, ಅದನ್ನು ನಾನು ನೋಡಿ ಒಪ್ಪಿದ್ದು, ಅದನ್ನು ನಿಪಿ-7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ನಾನು ಮು.ಮಾ.1 ರಿಂದ 4 ನ್ನು ನೋಡಿ ಗುರುತಿಸುತ್ತೇನೆ. ಮು.ಮಾ.1 ರಿಂದ 4 ರಲ್ಲಿರುವ ಸಹಿಯುಳ್ಳ ಗುರುತಿನ ಚೀಟಿಯನ್ನು ನೋಡಿ ಗುರುತಿಸುತ್ತೇನೆ.

ನಾನು ನಮ್ಮ ಮೇಲಧಿಕಾರಿಯವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ನಾನು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ.ವಿ.ಜಿ. ವಕೀಲರಿಂದಃ

ತಕ್ಷೀರು ನಡೆಯಿತು ಎನ್ನುವ ದಿನದಂದು ಬೆಳಗ್ಗೆ 6.45 ಗಂಟೆಗೆ ನಮ್ಮ ಮೇಲಧಿಕಾರಿಯವರಿಗೆ ತಕ್ಷೀರಿನ ಬಗ್ಗೆ ಬಾತ್ಮಿ ಬಂದಿರುತ್ತದೆ. ಆ ಸಮಯದಲ್ಲಿ ನಾನು ನಮ್ಮ ಕಚೇರಿಯಲ್ಲಿ ಹಾಜರಿದ್ದೆ. ಸಾಮಾನ್ಯವಾಗಿ ನಾವು ಕಚೇರಿಯಿಂದ ದಾಳಿ ನಡೆಸುವ ಸಮಯ ನಾವು ನಮ್ಮ ಕಚೇರಿಯ ದಿನಚರಿ ಪುಸ್ತಕದಲ್ಲಿ ಆ ಬಾಬ್ತು ನಮೂದು ಮಾಡಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ಅಂತಹ ಯಾವುದೇ

ದಾಖಲೆಯನ್ನು ತನಿಖಾಧಿಕಾರಿಯವರು ನನ್ನಿಂದ ಪಡೆದುಕೊಂಡಿರುವುದಿಲ್ಲ. ನಾವು ಧಾಳಿ ನಡೆಸುವ ಸಮಯದಲ್ಲಿ ಸುಳ್ಯದ ಕಚೇರಿಯ ಸಿಬ್ಬಂದಿಗಳು ನಮ್ಮ ಜೊತೆ ಇದ್ದಿರಲಿಲ್ಲ.

ತಕ್ಷೀರು ಮನೆಗೆ ಹೋಗುವಾಗ ದಾರಿಯನ್ನು ಕೇಳಿಕೊಂಡು ಸದರಿ ಮನೆಗೆ ಹೋಗಿರುತ್ತೇವೆ. ನಿಖರವಾಗಿ ನಾವು ಯಾರ ಬಳಿ ಸದರಿ ಮನೆಯ ದಾರಿಯ ಬಗ್ಗೆ ವಿಚಾರಿಸಿರುತ್ತೇವೆ ಎಂದು ನನಗೆ ಈಗ ನೆನಪಿರುವುದಿಲ್ಲ. ತಕ್ಷೀರು ಮನೆಯ ಸುತ್ತ-ಮುತ್ತ ಬೇರೆ ಮನೆಗಳು ಇದ್ದಿರಲಿಲ್ಲ. ನಾವು ಹೋದ ಮನೆಯ ಅಂಗಳದವರೆಗೂ ಯಾವುದೇ ವಾಹನಗಳು ಹೋಗುತ್ತಿರಲಿಲ್ಲ. ನಾವು ತಕ್ಷೀರು ಮನೆಯಿಂದ ಸುಮಾರು 150 ಮೀಟರು ದೂರದಲ್ಲಿ ನಮ್ಮ ಇಲಾಖಾ ವಾಹನವನ್ನು ನಾವು ನಿಲ್ಲಿಸಿರುತ್ತೇವೆ. ಸದರಿ ಮನೆಗೆ ಗೇರು ಇದ್ದಿರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಓರ್ವ ವ್ಯಕ್ತಿಯನ್ನು ನೋಡಿದ್ದೇನೆ ಎಂದು ಹೇಳಲಾದ ವ್ಯಕ್ತಿಯಾದ ಆರೋಪಿಯನ್ನು 100 ಮೀಟರು ಅಂತರದಿಂದ ನಾನು ನೋಡಿರುತ್ತೇನೆ. ಸದರಿ ವ್ಯಕ್ತಿಯು ಸದರಿ ತಕ್ಷೀರು ದಿನದಂದು ಯಾವ ಬಣ್ಣದ ಉಡುಪನ್ನು ಧರಿಸಿರುತ್ತಾರೆಂದು ನನಗೆ ಈಗ ನೆನಪಿರುವುದಿಲ್ಲ. ಓಡಿ ಹೋದ ವ್ಯಕ್ತಿಯನ್ನು ಹಿಡಿಯಲು ನಾವೆಲ್ಲರೂ ಬೆನ್ನಟ್ಟಿದ್ದರೂ , ಸದರಿ ವ್ಯಕ್ತಿಯು ನಮಗೆ ಸಿಕ್ಕಿರುವುದಿಲ್ಲ.

ತಕ್ಷೀರು ಮನೆಗೆ ಮನೆ ನಂಬ್ರ ಇತ್ತೋ-ಇಲ್ಲವೋ ಎಂದು ನನಗೆ ಈಗ ನೆನಪಿರುವುದಿಲ್ಲ. ಮನೆಯ ಬಳಿ ಇರುವ ಶೆಡ್ ಗೆ ಕಟ್ಟಡ ನಂಬ್ರ ಇತ್ತೋ-ಇಲ್ಲವೋ

ಎಂದು ನನಗೆ ಈಗ ನೆನಪಿರುವುದಿಲ್ಲ. ಸದರಿ ಮನೆಯು ಎರಡು ಕೋಣೆಗಳನ್ನು ಒಳಗೊಂಡಿತ್ತು. ಸದರಿ ಮನೆಯಲ್ಲಿ ಒಬ್ಬ ಹೆಂಗಸು ಮಾತ್ರ ಇದ್ದಿದ್ದರು.

ನಾವು ರಾಸಾಯನಿಕ ವಿಶ್ಲೇಷಣೆಗಾಗಿ ತೆಗೆದು ಉಳಿದ ಗೇರು ಹಣ್ಣಿನ ಕೊಳೆ ರಸವನ್ನು ಸ್ಥಳದಲ್ಲಿಯೇ ನಾಶಪಡಿಸಿರುತ್ತೇವೆ. ಆ ರೀತಿ ಗೇರು ಹಣ್ಣಿನ ಕೊಳೆ ರಸವನ್ನು ನಾಶಪಡಿಸಬೇಕಾದರೆ ನಾವು ನಮ್ಮ ಮೇಲಧಿಕಾರಿಗಳ ಅನುಮತಿಯನ್ನು ಪಡೆಯಬೇಕು ಎಂದರೆ ಸರಿ. ಸದರಿ ಶೆಡ್ ನಲ್ಲಿ ಕೃಷಿ ಉತ್ಪನ್ನಗಳ ದಾಸ್ತಾನು ಇದ್ದಿರಲಿಲ್ಲ. ಸದರಿ ಶೆಡ್ ನಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಯಾವುದೇ ಸಲಕರಣೆಗಳು ಇದ್ದಿರಲಿಲ್ಲ. ಆದಕಾರಣ ಸದರಿ ಗೇರು ಹಣ್ಣಿನ ಕೊಳೆ ರಸ ಹಾಗೂ ಕಳ್ಳಭಟ್ಟಿ ಸಾರಾಯಿಯನ್ನು ಎಲ್ಲಿ ತಯಾರಿಸಿರುತ್ತಾರೆಂದು ನಮಗೆ ಪತ್ತೆಯಾಗಿರುವುದಿಲ್ಲ ಎಂದರೆ ಸರಿ.

ತಕ್ಷೀರು ಮನೆಯು ನಮ್ಮ ಕಚೇರಿಯಿಂದ ಸುಮಾರು 37 ಕಿಲೋ ಮೀಟರು ದೂರದಲ್ಲಿತ್ತು. ತಕ್ಷೀರು ಮನೆಗೆ ನಾವು ಪುತ್ತೂರು-ಕುಂಬ್ರ-ಜಾಲ್ಸೂರು-ಅಡ್ಕಾರು ಮಾರ್ಗವಾಗಿ ಹೋಗಿರುತ್ತೇವೆ. ನಮ್ಮ ಕಚೇರಿಯಿಂದ ತಕ್ಷೀರು ಮನೆಗೆ ಹೋಗುವವರೆಗೆ ಚಾ.ಸಾ.1 ರವರು ಪಂಚರನ್ನು ಬರಮಾಡಿಕೊಳ್ಳುವಂತೆ ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಚಾ.ಸಾ.1 ರವರು ಹಾಗೂ ನಾವು ಪಂಚರನ್ನು ಬರಮಾಡಿಕೊಳ್ಳಲು ಪ್ರಯತ್ನಿಸಿದರೂ ನಮಗೆ ಪಂಚರು ಯಾರೂ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಿಪಿ-2 ರ ಮಹಜರನ್ನು ಚಾ.ಸಾ.4 ರವರು ಬರೆದಿರುತ್ತಾರೆ.

ಸದರಿ ಶೆಡ್ ನಲ್ಲಿ ಗೇರು ಹಣ್ಣಿನ ದಾಸ್ತಾನು ಇತ್ತಾ ಎಂದರೆ ಸಾಕ್ಷಿಯು ಡ್ರಮ್ ನೊಳಗೆ ಗೇರು ಹಣ್ಣಿನ ರಾಶಿ ಇತ್ತು ಎಂದು ನುಡಿಯುತ್ತಾರೆ. ಗೇರು ಹಣ್ಣನ್ನು ಹಾಗೆಯೇ ಬಿಟ್ಟರೆ ನೈಸರ್ಗಿಕವಾಗಿ ಅದರಲ್ಲಿ ಮದ್ಯದ ಅಂಶವು ಉತ್ಪತ್ತಿಯಾಗುತ್ತದೆ ಎಂದರೆ ಸರಿಯಲ್ಲ. ಗೇರು ಹಣ್ಣಿನ ಕೊಳೆ ರಸವನ್ನು ಕೂಡಾ ಹಾಗೆ ಬಿಟ್ಟರೆ ದಿನಕಳೆದಂತೆ ಕ್ರಮೇಣವಾಗಿ ಮದ್ಯದ ಅಂಶವು ಅಧಿಕವಾಗಿ ಹೋಗುತ್ತದೆ ಎಂದರೆ ಸರಿಯಲ್ಲ.

ಸ್ಥಳದಲ್ಲಿ ದೊರೆತ ಪ್ಲಾಸ್ಟಿಕ್ ಡ್ರಮ್, ಡಬ್ಬವನ್ನು ನಾವು ವಶಪಡಿಸಿಕೊಂಡಿರುತ್ತೇವೆ. ಅವುಗಳನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ತಕ್ಷೀರು ಮನೆಯ ಮುಂಭಾಗದಲ್ಲಿ ಅಡಿಕೆ ತೋಟ ಇದ್ದು, ಮನೆಯ ಹಿಂಭಾಗದಲ್ಲಿ ರಬ್ಬರ್ ತೋಟ ಇತ್ತು.

ನಾವು ಧಾಳಿಗೆ ಹೋಗಿದ್ದೇವೆ ಎನ್ನಲಾದ ಸಮಯ ಕೊರೋನಾ ಕಾಲವಾಗಿತ್ತು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನಾಗಲೀ , ನಮ್ಮ ಅಧಿಕಾರಿಯಾಗಲೀ ತಕ್ಷೀರು ಮನೆಗೆ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. ಕೊರೋನಾ ಕಾಲದಲ್ಲಿ ನಮ್ಮ ಇಲಾಖಾ ಅಂಕಿ-ಅಂಶಗೋಸ್ಕರ ಚಾ.ಸಾ.1 ರವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ತಕ್ಷೀರು ಮನೆಯಲ್ಲಿ ಯಾವುದೇ ಸ್ವತ್ತು ದೊರೆತಿದ್ದು

ಇಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಮಹಜರನ್ನು ತಕ್ಷೀರು ಸ್ಥಳದಲ್ಲಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಹೇಳಿದ ಎಲ್ಲಾ ದಾಖಲೆಗಳನ್ನು ನಮ್ಮ ಕಚೇರಿಯಲ್ಲಿಯೇ ಕುಳಿತು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ದಾಖಲೆಗಳಿಗೆ ಹಾಕಿರುವ ಸಹಿಗಳನ್ನು ನಮ್ಮ ಕಚೇರಿಯಲ್ಲಿ ನಾನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಪ್ರಾಯಸ್ಥರಾಗಿದ್ದ ಕಾರಣ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಓಡಿ ಹೋಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಧಿಕಾರಿಯವರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಕ್ಷೀರು ಸ್ಥಳದಿಂದ ನಾವು ಯಾವುದೇ ಸ್ವತ್ತನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.